ಹೆಚ್) ಪಾಳಿಯ ಆಪರೇಟರ್ / ಅಧಿಕಾರಿಗಳ ಸೂಚನೆ ಮೇರೆಗೆ ರೋಡ್ ಮಿಲ್ಕ್ ಟ್ಯಾಂಕರ್‌ಗಳ ಹಾಗೂ ಮಿಲ್ಕ್ ಟ್ಯಾಂಕ್‌ಗಳನ್ನು ಹೊರಗೆ ಮತ್ತು ಒಳಗೆ ಸಂಪೂರ್ಣ ಸ್ವಚ್ಛಗೊಳಿಸುವುದು ಹಾಗೂ ಹಾಲನ್ನು ಲೋಡ್ ಮಾಡುವುದು ಮತ್ತು ಅನ್‌ಲೋಡ್ ಮಾಡುವುದು. ಸ್ವಚ್ಛತೆಗೊಳಿಸಿದ ಬಗ್ಗೆ ಪಾಳಿಯ ಮೇಲ್ವಿಚಾರಕರಿಂದ ದೃಢೀಕರಣ ಪಡೆಯುವುದು. ಇದಕ್ಕೆ ಸಂಬಂಧಿಸಿದ ಇತರೆ ಯಾವುದೇ ಕೆಲಸ ಕಾರ್ಯಗಳನ್ನು ವಿಭಾಗದ ಪಾಳಿಯ ಮೇಲ್ವಿಚಾರಕರ ಸೂಚನೆಯಂತೆ ನಿರ್ವಹಿಸುವುದು.

ಐ) ಟ್ಯಾಂಕರ್ ಸ್ವಚ್ಛಗೊಳಿಸಿ ಹಾಲು ತುಂಬಿ ರವಾನೆಮಾಡಲು ಸಾಮಾನ್ಯ ಪಾಳಿಯಲ್ಲಿ ಒಬ್ಬರು ಕಾರ್ಮಿಕರು ಮತ್ತು ರಾತ್ರಿ ಪಾಳಿಯಲ್ಲಿ ಒಬ್ಬರು ಕಾರ್ಮಿಕರು ಹಾಜರಿರುವಂತೆ ನೋಡಿಕೊಳ್ಳುವುದು.

**<u>ಅರೆ ಕುಶಲ ಕಾರ್ಮಿಕರು ನಿರ್ವಹಿಸಬೇಕಾದ ಕೆಲಸಗಳ ವಿವರ:</u>**

1. ಪಾಳಿಯ ಹಂಚಿಕೆ ಪಟ್ಟಿಯಂತೆ ಕೆಲಸಕ್ಕೆ 10 ನಿಮಿಷ ಮುಂಚಿತವಾಗಿ ಕೆಲಸಕ್ಕೆ ಹಾಜರಾಗುವುದು.
2. ದಿನವಹಿ ರೆಫ್ರೀಜರೆಷನ್ ವಿಭಾಗದಲ್ಲಿ ಕಂಡೆನ್ಸ್‌ರ್ ಫಿಲ್ಟರ್‌ಗಳನ್ನು ಸ್ವಚ್ಛಗೊಳಿಸುವುದು.
3. ದಿನವಹಿ ರೆಫ್ರೀಜರೆಷನ್ ವಿಭಾಗದಲ್ಲಿ ಆಯಿಲ್ ಸಪರೇಟರ್ ಮತ್ತು ಐ.ಬಿ.ಟಿ ಕಾಯಿಲ್ಸ್‌ಗಳಿಂದ ಆಯಿಲ್‌ನ್ನು ಪರ್ಜ್/ಡ್ರೈನ್ ಮಾಡುವ ಕೆಲಸದಲ್ಲಿ ಸಹಕರಿಸುವುದು.
4. ಕಂಡೆನ್ಸ್‌ರ್‌ನ ಎಲ್ಲಾ ಕಾಯಿಲ್‌ಗಳ ಮೇಲೆ ನೀರು ಬೀಳಲು ಅನುವಾಗುವಂತೆ ನೀರಿನ ಲೈನುಗಳ ರಂಧ್ರಗಳನ್ನು ಶುಚಿಗೊಳಿಸುವುದು.
5. ವಾಟರ್ ಸಾಫ್ಟನರ್ ಯಂತ್ರದ ನೀರಿನ ಗಡಸುತನದ ಬಗ್ಗೆ ದಾಖಲಿಸುವುದು.
6. ಸ್ವೀಕರಿಸಿದ ಹಾಲಿನ ಉಷ್ಣತೆ $5^0$ ಸೆ. ಗಿಂತ ಅಧಿಕವಾಗದಂತೆ ನೋಡಿಕೊಳ್ಳುವುದು. ಐ.ಬಿ.ಟಿ ನೀರಿನ ಉಷ್ಣತೆ ಮತ್ತು ಹಾಲಿನ ಉಷ್ಣತೆ ಪ್ರತಿ 1/2 ಗಂಟೆಗೊಮ್ಮೆ ದಾಖಲಿಸುವುದು.
7. ಪ್ರತಿ ಮೂರು (3) ತಿಂಗಳಿಗೊಮ್ಮೆ ಅಥವಾ ಅಗತ್ಯತೆಗನುಸಾರ ಕಂಪ್ರೆಸರ್ ವಾಟರ್ ಜಾಕೆಟ್‌ಗಳನ್ನು ಬಿಚ್ಚಿ ಸ್ವಚ್ಛಗೊಳಿಸುವುದು.
8. ಪ್ರತಿ ಆರು ತಿಂಗಳಿಗೊಮ್ಮೆ ಕಂಡೆನ್ಸ್‌ರ್ ಲಿಕ್ವಿಡ್ ಲೈನ್‌ಗೆ ಹಳದಿ ಬಣ್ಣ ಹಚ್ಚಿ ಅದರ ಮೇಲೆ ಗ್ರೀಸ್ ಹಚ್ಚುವುದು. (ಕಪ್ಪು ಬಣ್ಣದ ಗ್ರೀಸ್)
9. ಪ್ರತಿ ಆರು ತಿಂಗಳಿಗೊಮ್ಮೆ ಎಂ.ಎಸ್ ಪೈಪ್‌ಗಳಿಗೆ ಎನಾಮಲ್ ಬಣ್ಣ ಹಚ್ಚುವುದು.
10. ವಿದ್ಯುಚ್ಛಕ್ತಿ ಪ್ಯಾನಲ್ ಬೋರ್ಡ್‌ಗಳನ್ನು ಆಗಿಂದಾಗ್ಗೆ ಸ್ವಚ್ಛಗೊಳಿಸುವುದು.
11. ರೆಫ್ರಿಜರೆಷನ್ ವಿಭಾಗ, ವಿದ್ಯುಚ್ಛಕ್ತಿ ವಿಭಾಗಗಳಲ್ಲಿ ಸ್ವಚ್ಛತೆಯನ್ನು ಕಾಪಾಡುವುದು.
12. ಕಂಡೆನ್ಸ್‌ರ್ ಪಂಪ್ ಸೆಟ್, ಚಿಲ್ಡ್ ವಾಟರ್ ಪಂಪ್ ಸೆಟ್ಸ್, ಮಿಲ್ಕ್ ಪಂಪ್ ಸೆಟ್ಸ್, ಕ್ಯಾನ್ ಸ್ಕ್ರಬರ್‌ಗಳ ಸ್ವಚ್ಛತೆ ಕೆಲಸ ನಿರ್ವಹಿಸುವುದು.
13. ಪಾಳಿಯನ್ನು ಹೊರತು ಪಡಿಸಿ ತುರ್ತು ಸಂದರ್ಭದಲ್ಲಿ ಮೇಲ್ವಿಚಾರಕರು ತಿಳಿಸಿದಾಗ ಕೆಲಸಕ್ಕೆ ಹಾಜರಾಗುವುದು.
14. ಃಒಅ ಗಳಲ್ಲಿ ದುರಸ್ಥಿಗೆ ಬಳಸಲಾದ ಬಿಡಿಭಾಗಗಳು / ಕನ್ಸೂಮಬಲ್‌ಗಳ ವಿವರಗಳ ಮಾಹಿತಿಗಳನ್ನು ದಾಖಲಿಸಲು ಕ್ರಮವಿಡುವುದು.
15. ಪ್ರತಿದಿನ ಡಿ.ಜಿ ಸೆಟ್ ಯಂತ್ರದ ರೇಡಿಯಟರ್‌ನಲ್ಲಿ ನೀರು ತುಂಬುವುದು.
16. ಡಿ.ಜಿ ಸೆಟ್ ಯಂತ್ರದ ಸ್ವಚ್ಛತೆ ಕೆಲಸ ನಿರ್ವಹಿಸುವುದು.
17. ಡಿ.ಜಿ ಸೆಟ್‌ಗೆ ಬೇಕಾದ ಡಿಸೇಲ್‌ನ್ನು ಅಗತ್ಯಕ್ಕೆ ತಕ್ಕಂತೆ ದಾಸ್ತಾನು ಮಾಡುವ ಕೆಲಸ ನಿರ್ವಹಿಸುವುದು.

**<u>ಕುಶಲ ಕಾರ್ಮಿಕರು ನಿರ್ವಹಿಸಬೇಕಾದ ಕೆಲಸಗಳ ವಿವರ:</u>**

1. ಡೇರಿ / ಶೀತಲೀಕರಣ ಕೇಂದ್ರದ ಮೇಲ್ವಿಚಾರಕರು ನಿಯೋಜಿಸಿರುವ ಪಾಳಿಯ ಕೆಲಸಕ್ಕೆ ಹಾಜರಾಗುವುದು.
2. ಪಾಳಿಯ ಪ್ರಾರಂಭಕ್ಕೆ 10 ನಿಮಿಷ ಮುಂಚಿತವಾಗಿ ಕೆಲಸಕ್ಕೆ ಹಾಜರಿರುವುದು.
3. ಹಾಲು ಸ್ವೀಕರಣಾ ಸ್ಥಳ ಮತ್ತು ಹಾಲು ಸ್ವೀಕರಣಾ ಉಪಕರಣಗಳು ಸ್ವಚ್ಛವಾಗಿರುವ ಬಗ್ಗೆ ಗಮನಿಸಿ ದೃಢಪಡಿಸಿಕೊಳ್ಳುವುದು.
4. ಹಾಲು ಸ್ವೀಕರಣೆಗೆ ಮುನ್ನ ಹಾಲಿನ Sample Bottle ಗಳು ಸ್ವಚ್ಛವಾಗಿರುವುದನ್ನು ದೃಢಪಡಿಸಿಕೊಂಡು ಬಾಟಲ್ ಮೇಲೆ ಕ್ರಮ ಸಂಖ್ಯೆ ನಮೂದಿಸಿ ಕ್ರಮವಾಗಿ ಸ್ವಚ್ಛ ಟ್ರೇಗಳಲ್ಲಿ ಹಾಲಿನ ಮಾದರಿ ಬಾಟಲ್‌ಗಳನ್ನು ಜೋಡಿಸಿಕೊಳ್ಳಬೇಕು.

5. ಹಾಲಿನ ಸಿ.ಓ.ಬಿ ಪತ್ತೆಹಚ್ಚಲು ಬೇಕಾದ ರಾಸಾಯನಿಕಗಳು, ಉಪಕರಣ, ಇತ್ಯಾದಿಗಳನ್ನು ಹಾಲು ಸ್ವೀಕರಣಾ ಸ್ಥಳದ ಟೇಬಲ್ ಮೇಲೆ ಲಭ್ಯವಿರುವಂತೆ ಜೋಡಿಸಿ ಇಟ್ಟಿರಬೇಕು.
6. ಹಾಲು ಸ್ವೀಕರಣೆ ಪ್ರಾರಂಭಕ್ಕೆ ಮುಂಚೆ ಎಲ್ಲಾ ಸಿಬ್ಬಂದಿಯವರು ಕ್ಯಾಪ್ ಮತ್ತು ಮಾಸ್ಕ್‌ಗಳನ್ನು ಹಾಕಿರುವುದನ್ನು ದೃಢಪಡಿಸಿಕೊಳ್ಳುವುದು.
7. ಹಾಲಿನ ಸ್ವೀಕರಣೆ ಸಂಬಂಧವಾಗಿ ಉಪಯೋಗಿಸುವ ಟ್ರಕ್ ಶೀಟ್, ಪ್ರಿಂಟರ್‌ಗಳನ್ನು ಹಾಲು ಸ್ವೀಕರಣೆಗೆ ಮೊದಲು ಸಿದ್ಧ ಮಾಡಿಕೊಳ್ಳುವುದು.
8. ಹಾಲು ಸ್ವೀಕರಣೆ ಮಾಡುವಾಗ ಪ್ರತಿಯೊಂದು ಕ್ಯಾನಿನ ಹಾಲನ್ನು ಪ್ಲಂಜರ್‌ನಿಂದ ಕಲಕಿ ಉತ್ತಮ ಗುಣಮಟ್ಟದ ಹಾಲನ್ನು ಮಾತ್ರ ತೂಕಕ್ಕೆ ರವಾನಿಸುವುದು.
9. ಪ್ರತಿ ಸಂಘದ ಹಾಲಿನ ಮಾದರಿಯನ್ನು ಕ್ರಮ ಸಂಖ್ಯೆಯಂತೆ ಸರಿಯಾದ ಪ್ರಮಾಣದಲ್ಲಿ Sample Bottle ಗಳಲ್ಲಿ ಶೇಖರಿಸಿ, ಗುಣಮಟ್ಟ ಪರೀಕ್ಷೆಗಾಗಿ ಲ್ಯಾಬ್‌ಗೆ ನೀಡುವುದು.
10. ಸಂಘಗಳ ಹಾಲಿನ ಸ್ಯಾಂಪಲ್‌ಗಳನ್ನು ಸರಿಯಾದ ಕ್ರಮ ಅನುಸರಿಸಿ ರೆಫ್ರಿಜರೇಟರ್‌ನಲ್ಲಿ ಎಚ್ಚರಿಕೆಯಿಂದ ಸಂಗ್ರಹಿಸುವುದು.
11. ಸಂಘಗಳಿಂದ ಬರುವ ಪ್ರತಿನಿಧಿ, ಒಕ್ಕೂಟದ ಅಧಿಕಾರಿಗಳು ಬಂದಾಗ ಸಂಗ್ರಹಿಸಿದ ಹಾಲಿನ ಮಾದರಿಗಳನ್ನು ಒದಗಿಸುವುದು.
12. ಹಾಲು ಸ್ವೀಕರಣೆ ನಂತರ ನಿರಂತರವಾಗಿ ಹಾಲನ್ನು $5^0$ಅ ಗಿಂತ ಕಡಿಮೆ ಉಷ್ಣತೆಗೆ ತಣಿಸಿದ ಬಗ್ಗೆ ದಾಖಲಿಸುವುದು.
13. ಹಿಂದಿನ ದಿನ ಸ್ವೀಕರಿಸಿದ ಹಾಲಿನ ಮಾದರಿ ಸ್ಯಾಂಪಲ್‌ಗಳನ್ನು ಮರು ಪರೀಕ್ಷೆ ಆದ ನಂತರ ಮರುದಿನದ ಹಾಲು ಸ್ವೀಕರಣೆ ನಂತರ ಮೇಲಾಧಿಕಾರಿಗಳಿಗೆ ತಿಳಿಸಿ Bottle ಗಳನ್ನು ಸ್ವಚ್ಛ ನೀರಿನಿಂದ ಹಾಗು ಡಿಟರ್ಜೆಂಟ್‌ನಿಂದ ತೊಳೆದಿಡಬೇಕು.
14. ಹಾಲು ಸ್ವೀಕರಣೆಗೆ ಉಪಯೋಗಿಸುವ ಪೈಪ್ ಲೈನ್, ಚಿಲ್ಲರ್, ಶೇಖರಣೆ ಮಾಡುವ ಸೈಲೋಗಳ ಸ್ವಚ್ಛತೆ ದಾಖಲಿಸುವುದು.
15. ಹಾಲು ಸ್ವೀಕರಣೆಗೆ ಸಂಬಂಧಪಟ್ಟ ಇತರೆ ದಾಖಲೆ ರಿಜಿಸ್ಟರ್‌ಗಳನ್ನು ಸರಿಯಾಗಿ ತಪ್ಪಿಲ್ಲದೆ ಬರೆಯುವುದು. ಹಾಲು ಸ್ವೀಕರಣೆ, ರವಾನೆ ಮತ್ತು ಪರೀಕ್ಷೆಗೆ ಸಂಬಂಧಿಸಿದಂತೆ ಮಾರ್ಗವಾರು ಮತ್ತು ಪಾಳಿವಾರು, ದಿನವಹಿ ಹಾಲು, ಜಿಡ್ಡು ಮತ್ತು ಜಿಡ್ಡೇತರ ಘನಾಂಶಗಳ Statement ತಯಾರಿಸಿ ಮಂಡಿಸುವುದು ಮತ್ತು ಮಾಸಿಕ ಹಾಲು, ಜಿಡ್ಡು ಮತ್ತು ಜಿಡ್ಡೇತರ ಘನಾಂಶಗಳ ತಃಖ್ತೆ ತಯಾರಿಸುವುದು. ಹಾಲು ಜಿಡ್ಡು ಜಿಡ್ಡೇತರ ಘನಾಂಶಗಳ ಸ್ವೀಕರಣೆ ವಿತರಣೆ ಮತ್ತು ವಿತರಿಸಿದ ಡೈರಿಯಿಂದ ಬರುವ ಸ್ವೀಕೃತಿಗಳಿಗೆ ವ್ಯತ್ಯಾಸಗಳಿರದಂತೆ ನೋಡಿಕೊಳ್ಳುವುದು.
16. ವಿಭಾಗದ ಮೇಲ್ವಿಚಾರಕರು ಸೂಚಿಸುವ ಇತರೆ ಕೆಲಸಗಳನ್ನು ನಿರ್ವಹಿಸುವುದು.

ಸಹಿ/–

**ದಿನಾಂಕ:** **ವ್ಯವಸ್ಥಾಪಕ ನಿರ್ದೇಶಕರು**

**ಟಿಪ್ಪಣಿ: ಮೇಲ್ಕಂಡ ಕೆಲಸದ ವಿವರಗಳನ್ನು ಒಪ್ಪಿಕೊಂಡಿರುವುದಕ್ಕೆ ಗುತ್ತಿಗೆದಾರರು ಸಹಿ ಮಾಡಿ ಇದನ್ನು ಟೆಂಡರ್‌ನೊಂದಿಗೆ ಸಲ್ಲಿಸುವುದು.**

**“ ಮೇಲ್ಕಂಡ ಕೆಲಸದ ವಿವರಗಳನ್ನು ಓದಿ ತಿಳಿದುಕೊಂಡು ಒಪ್ಪಿರುತ್ತೇನೆ.”**

**ದಿನಾಂಕ:** **ಟೆಂಡರ್‌ದಾರರ ಸಹಿ ಮತ್ತು ಸೀಲು**

**ಅನುಬಂಧ – ‘ ಇ ’**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**
**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ–577 222**

---

**–: <u>ತುಂಡು ಗುತ್ತಿಗೆ ಮೇಲೆ ನಿರ್ವಹಿಸಬೇಕಾದ ಕೆಲಸಗಳು ಈಗಿರುವಂತೆ ಸರಾಸರಿ ಅಂದಾಜು ದಿನವಹಿ ಪ್ರಮಾಣದ ವಿವರಗಳು (ಬದಲಾವಣೆಗೆ ಒಳಪಟ್ಟಿರುತ್ತದೆ)</u> :–**

**A) ಎಲ್ಲಾ ಶೀತಲೀಕರಣ ಕೇ0ದ್ರಗಳಲ್ಲಿ:**

**1) <u>ಹಾಲಿನ ಕ್ಯಾನುಗಳ ಸ್ವೀಕರಣೆ ಮತ್ತು ಸ್ವಚ್ಛತೆಗೆ ಸಂಬಂಧಿಸಿದ ಕೆಲಸಗಳು :</u>**

| | |
|---|---|
| ತಡಗಣಿ ಸಿ.ಸಿ. | 53,000 ಕೆ.ಜಿ. |
| ಆನಂದಪುರಂ ಸಿ.ಸಿ. | 15,000 ಕೆ.ಜಿ. |
| ಹೊನ್ನಾಳಿ ಸಿ.ಸಿ. | 50,000 ಕೆ.ಜಿ. |
| ಚಿತ್ರದುರ್ಗ ಸಿ.ಸಿ | 35,000 ಕೆ.ಜಿ. |
| ಹೊಸದುರ್ಗ ಸಿ.ಸಿ. | 22,000 ಕೆ.ಜಿ. |
| ಬಿ.ಜಿ.ಕೆರೆ ಸಿ.ಸಿ. | 12,000 ಕೆ.ಜಿ. |
| ಚಳ್ಳಕೆರೆ ಸಿ.ಸಿ | 12,000 ಕೆ.ಜಿ. |

(40 ಲೀಟರ್ ಪರಿಮಾಣದ ಕ್ಯಾನುಗಳಲ್ಲಿ ಹಾಲನ್ನು ಸ್ವೀಕರಿಸಲಾಗುತ್ತದೆ.)

**2) <u>ಹಾಲಿನ ಟ್ಯಾಂಕ್‌ಗಳ(ಸೈಲೋ) ಸ್ವಚ್ಛತೆ ಬಗ್ಗೆ:</u>**

| | |
|---|---|
| ತಡಗಣಿ ಸಿ.ಸಿ. | 10,000 ಲೀ ಸಾಮರ್ಥ್ಯದ ಸಂಖ್ಯೆ–2 |
| | 15,000 ಲೀ ಸಾಮರ್ಥ್ಯದ ಸಂಖ್ಯೆ–1 |
| ಆನಂದಪುರಂ ಸಿ.ಸಿ. | 10,000 ಲೀ ಸಾಮರ್ಥ್ಯದ ಸಂಖ್ಯೆ–1 |
| | 15,000 ಲೀ ಸಾಮರ್ಥ್ಯದ ಸಂಖ್ಯೆ–1 |
| ಹೊನ್ನಾಳಿ ಸಿ.ಸಿ. | 15,000 ಲೀ ಸಾಮರ್ಥ್ಯದ ಸಂಖ್ಯೆ–3 |
| ಚಿತ್ರದುರ್ಗ ಸಿ.ಸಿ | 10,000 ಲೀ. ಸಾಮರ್ಥ್ಯದ ಸಂಖ್ಯೆ–2 |
| | 15,000 ಲೀ. ಸಾಮರ್ಥ್ಯದ ಸಂಖ್ಯೆ–1 |
| ಹೊಸದುರ್ಗ ಸಿ.ಸಿ. | 10,000 ರಿಂದ 15,000 ಲೀ. ಸಾಮರ್ಥ್ಯದ ಸಂಖ್ಯೆ–3 |
| ಬಿ.ಜಿ.ಕೆರೆ ಸಿ.ಸಿ. | 5,000 ಲೀ. ಸಾಮರ್ಥ್ಯದ ಸಂಖ್ಯೆ–2 |
| ಚಳ್ಳಕೆರೆ ಸಿ.ಸಿ | 10,000 ಲೀ ಸಾಮರ್ಥ್ಯದ ಸಂಖ್ಯೆ–1 |

**3) <u>ರೋಡ್ ಮಿಲ್ಕ್ ಟ್ಯಾಂಕರ್‌ಗಳ ಸ್ವಚ್ಛತೆ (ಪ್ರತಿದಿನ ಅಂದಾಜು):</u>**

| | | |
|---|---|---|
| ತಡಗಣಿ ಸಿ.ಸಿ | : | ಸಂಖ್ಯೆ–3 |
| ಹೊನ್ನಾಳಿ ಸಿ.ಸಿ | : | ಸಂಖ್ಯೆ–5 |
| ಚಿತ್ರದುರ್ಗ ಸಿ.ಸಿ | : | ಸಂಖ್ಯೆ–5 |
| ಆನಂದಪುರಂ ಸಿ.ಸಿ | : | ಸಂಖ್ಯೆ–2 |
| ಬಿ.ಜಿ.ಕೆರೆ ಸಿ.ಸಿ | : | ಸಂಖ್ಯೆ–1 |
| ಹೊಸದುರ್ಗ ಸಿ.ಸಿ | : | ಸಂಖ್ಯೆ–2 |
| ಚಳ್ಳಕೆರೆ ಸಿ.ಸಿ | : | ಸಂಖ್ಯೆ–1 |

**(ಟಿಪ್ಪಣಿ: ಮೇಲ್ಕಂಡ ಅಂಕಿ ಅಂಶಗಳು ಅಂದಾಜು ಪ್ರಮಾಣದ್ದಾಗಿದ್ದು, ಬದಲಾವಣೆಗೆ ಒಳಪಟ್ಟಿರುತ್ತದೆ.)**

**ಮೇಲ್ಕಂಡ ವಿವರಗಳನ್ನು ಗಮನಿಸಿದ್ದೇನೆ.**

**ದಿನಾಂಕ:** **ಗುತ್ತಿಗೆದಾರರ ಸಹಿ ಹಾಗೂ ಸೀಲ್**

